ಹೊಡೆದದ್ದಷ್ಟೆ ಬೆಳ್ಳಿಗೆರೆ. ಉಳಿದದ್ದು ಕಾರ್ಮೋಡ. ನಸೀಮ್ ಶಾ ಹಾಗೂ ಹ್ಯಾರಿಸ್ ರೌಫ್ ತಲಾ ಮೂರು ವಿಕೆಟ್‌ಗಳನ್ನು ಪಡೆದು, ಭಾರತದ ಜಂಘಾಬಲ ಉಡುಗಿಸಿದ್ದರು. ಜಸ್‌ಪ್ರೀತ್ ಬೂಮ್ರಾ (3/14), ಹಾರ್ದಿಕ್ ಪಾಂಡ್ಯ (2/24), ಅರ್ಷದೀಪ್ ಸಿಂಗ್ (1/31) ಸಾಂಘಿಕ ಹೋರಾಟದಿಂದ ಪಾಕಿಸ್ತಾನ ಗೆಲುವಿನ ಗಡಿಯಿಂದ ಆರು ರನ್ ದೂರವೇ ಉಳಿಯಿತು.

ಅದಕ್ಕೂ ಮೊದಲಿನ ಪಂದ್ಯದಲ್ಲಿ ಐರ್ಲೆಂಡ್ ವಿರುದ್ಧ ಭಾರತ ಎಂಟು ವಿಕೆಟ್‌ಗಳ ಗೆಲುವು ದಾಖಲಿಸಿತ್ತು. ರೋಹಿತ್ ಶರ್ಮ ಆ ಪಂದ್ಯದಲ್ಲಿ 37 ಎಸೆತಗಳಲ್ಲಿ 52 ರನ್ ಗಳಿಸಿದ್ದರು. ಪಂತ್ ಆಗಲೂ 26 ಎಸೆತಗಳಲ್ಲಿ 36 ರನ್ ಕಲೆಹಾಕಿದ್ದರು.

ಅಮೆರಿಕ ಎದುರು ನಡೆದ ನಂತರದ ಪಂದ್ಯದಲ್ಲಿ ಸೂರ್ಯಕುಮಾರ್ ಯಾದವ್ ತಾಳ್ಮೆಯಿಂದ ಆಡಿ 49 ಎಸೆತಗಳಲ್ಲಿ 50 ರನ್ ಸೇರಿಸಿದ್ದರು. ಶಿವಂ ದುಬೆ 35 ಎಸೆತಗಳಲ್ಲಿ 31 ರನ್ ಅಷ್ಟೇ ಗಳಿಸಲು ಸಾಧ್ಯವಾಗಿತ್ತು. ಅರ್ಷದೀಪ್ ಕೇವಲ 9 ರನ್ ನೀಡಿ 4 ವಿಕೆಟ್‌ಗಳನ್ನು ಪಡೆದಿದ್ದ ಆ ಪಂದ್ಯದಲ್ಲಿ, ಭಾರತ 111 ರನ್‌ಗಳ ಗುರಿ ಮುಟ್ಟಲು ಹತ್ತೊಂಬತ್ತನೇ ಓವರ್‌ವರೆಗೆ ಆಡಬೇಕಾಗಿ ಬಂತು. ಕೆನಡಾ ವಿರುದ್ಧದ ಪಂದ್ಯ ಮಳೆಯಿಂದ ತೊಳೆದುಹೋದ ಮೇಲೆ ತಂಡದ ಮುಂದೆ 'ಸೂಪರ್‌ಎಯ್ಟ್' ಸವಾಲು.

ಅಫ್ಘಾನಿಸ್ತಾನದ ಸ್ಪಿನ್ನರ್‌ಗಳು ಮುಟ್ಟಿನೋಡಿಕೊಳ್ಳುವಂತೆ ಆಡಿದ ಸೂರ್ಯಕುಮಾರ್, 28 ಎಸೆತಗಳಲ್ಲೇ 53 ರನ್ ದೋಚಿದರು. ಹಾರ್ದಿಕ್ ಪಾಂಡ್ಯ 24 ಎಸೆತಗಳಲ್ಲಿ 31 ರನ್ ಸೇರಿಸಿದರು. 181 ರನ್‌ಗಳ ಮೊತ್ತ ಸ್ಕೋರ್ ಬೋರ್ಡ್ ಮೇಲೆ ದಾಖಲಾಗಲು ಇಷ್ಟು ಸಾಕಾಯಿತು. ಅರ್ಷದೀಪ್, ಬೂಮ್ರಾ ಇಬ್ಬರೂ ಮತ್ತೊಮ್ಮೆ ತಲಾ ಮೂರು ವಿಕೆಟ್‌ಗಳನ್ನು ಪಡೆದು, ಭಾರತಕ್ಕೆ 47 ರನ್‌ಗಳ ದೊಡ್ಡ ವಿಜಯ ದಕ್ಕಿಸಿಕೊಟ್ಟರು.


ಜಸ್‌ಪ್ರೀತ್ ಬೂಮ್ರಾ: ಭಾರತದ ಗೆಲುವಿನ ಎಕ್ಸ್‌ಪ್ರೆಸ್

ಕೊಹ್ಲಿ 37 ರನ್‌ಗಳಿಂದ ಫಾರ್ಮ್‌ಗೆ ಮರಳುವ ಲಕ್ಷಣ ತೋರಿದ್ದು, ರೋಹಿತ್ ಶರ್ಮ 11 ಎಸೆತಗಳಲ್ಲಿ 23 ರನ್ ಚಚ್ಚಿದ್ದು, ರಿಷಭ್ ಪಂತ್ ಹಾಗೂ ಶಿವಂ ದುಬೆ ಕ್ರಮವಾಗಿ 36 ಹಾಗೂ 34 ರನ್‌ಗಳನ್ನು ಸಿಡಿಸಿದ್ದು, ಕೊನೆಯಲ್ಲಿ ಹಾರ್ದಿಕ್ 27 ಎಸೆತಗಳಲ್ಲೇ 50 ರನ್ ದೋಚಿದ್ದು; ಭಾರತವು 196 ರನ್‌ಗಳನ್ನು ಕೇವಲ 5 ವಿಕೆಟ್ ಕಳೆದುಕೊಂಡು ಕಲೆಹಾಕಲು ಕಾರಣವಾದವು. ಕುಲದೀಪ್ ಯಾದವ್ ಮೂರು ವಿಕೆಟ್ ಕಿತ್ತಿದ್ದರಿಂದ ಆ ಪಂದ್ಯದಲ್ಲಿಯೂ ಭಾರತಕ್ಕೆ 50 ರನ್‌ಗಳ ಭಾರಿ ಗೆಲುವು.

ಮುಂದಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ಎದುರಾಳಿ. ರೋಹಿತ್ ಶರ್ಮ ಕೆರಳಿದರು. 41 ಎಸೆತಗಳಲ್ಲಿ 92 ರನ್ ಹೊಡೆದದ್ದೇ ಭಾರತ ಆತ್ಮವಿಶ್ವಾಸದ ಅಲೆ ಏರಿತು. ಸೂರ್ಯ ಆ ಪಂದ್ಯದಲ್ಲೂ 16 ಎಸೆತಗಳಲ್ಲಿ 31 ರನ್ ಸಿಡಿಸಿದರು. 206 ರನ್‌ಗಳ ಒಳ್ಳೆಯ ಮೊತ್ತ ಸೇರಿಸಲು ಇಷ್ಟು ಸಾಕಾಯಿತು. ಭಾರತದ ಕೈಯಿಂದ ಏಕದಿನ ವಿಶ್ವಕಪ್ ಕಸಿದುಕೊಂಡಿದ್ದ ಟ್ರಾವಿಸ್ ಹೆಡ್ ಆ ಪಂದ್ಯದಲ್ಲಿಯೂ 43 ಎಸೆತಗಳಲ್ಲಿ 76 ರನ್ ಚಚ್ಚಿದಾಗ, 'ಏನಪ್ಪಾ ಕಥೆ' ಎಂಬ ಪ್ರಶ್ನೆ ಮೂಡಿತ್ತು. ಕೊನೆಗೆ 24 ರನ್‌ಗಳ ಇನ್ನೊಂದು ಗೆಲುವು ದೇಶಕ್ಕೆ. ಅರ್ಷದೀಪ್ ಆ ಪಂದ್ಯದಲ್ಲಿಯೂ ಮೂರು ವಿಕೆಟ್‌ಗಳನ್ನು ಕಿತ್ತರು.

ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್‌ಗೆ ಮುಖಾಮುಖಿ. 2022ರ ಟ್ವೆಂಟಿ20 ಸೆಮಿಫೈನಲ್‌ನಲ್ಲಿ ಹತ್ತು ವಿಕೆಟ್‌ಗಳಿಂದ ಭಾರತ ಸೋತಿದ್ದ ಕಹಿ ನೆನಪು ಇತ್ತು. ರೋಹಿತ್ ಅದನ್ನು ಅಳಿಸಿಹಾಕುವಂತೆ ಮತ್ತೊಂದು ಅರ್ಧ ಶತಕ ಗಳಿಸಿದರು. ಸೂರ್ಯ 36 ಎಸೆತಗಳಲ್ಲಿ 47 ರನ್ ಹೊಡೆದರು. ಕುಲದೀಪ್ ಹಾಗೂ ಅಕ್ಷರ್ ಪಟೇಲ್ ತಲಾ ಮೂರು ವಿಕೆಟ್‌ಗಳನ್ನು ಕಿತ್ತು, 103 ರನ್‌ಗಳಿಗೇ ಇಂಗ್ಲೆಂಡ್ ತಂಡದವರನ್ನು ಕಟ್ಟಿಹಾಕಿದರು. ಗೆಲ್ಲಲು ಆ ತಂಡಕ್ಕೆ ಬೇಕಿದ್ದುದು 172 ರನ್.

ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾದ ಬಲಾಢ್ಯರ ಸವಾಲು. ವಿರಾಟ್ ಕೊಹ್ಲಿ (76), ಅಕ್ಷರ್ ಪಟೇಲ್ (31 ಎಸೆತಗಳಲ್ಲಿ 47), ಶಿವಂ ದುಬೆ (16 ಎಸೆತಗಳಲ್ಲಿ 27) ಇವರೆಲ್ಲರ ಸಾಂಘಿಕ ಬ್ಯಾಟಿಂಗ್ ಬಲದಿಂದಾಗಿ 176/7ಕ್ಕೆ ಸ್ಕೋರ್ ಹಿಗ್ಗಿತು. ಕ್ವಿಂಟನ್ ಡಿ ಕಾಕ್ (31 ಎಸೆತಗಳಲ್ಲಿ 39), ಟಿ. ಸ್ಟಬ್ಸ್ (21 ಎಸೆತಗಳಲ್ಲಿ 31) ಹಾಗೂ ಹೆನ್ರಿಚ್ ಕ್ಲಾಸೆನ್ (27 ಎಸೆತಗಳಲ್ಲಿ 52) ಪಂದ್ಯವನ್ನು 15ನೇ ಓವರ್‌ನ ಘಟ್ಟದಲ್ಲಿ ಕಿತ್ತುಕೊಂಡಂತೆ ಭಾಸವಾಗಿತ್ತು. ಆದರೆ, ಬೂಮ್ರಾ ಯಾಕೆ 'ಬೂಮ್ ಬೂಮ್' ಎನ್ನುವುದು ಮತ್ತೆ ಗೊತ್ತಾಯಿತು. 4 ಓವರ್‌ಗಳಲ್ಲಿ 18 ರನ್ ಮಾತ್ರ ನೀಡಿ ಇಬ್ಬರು ದಿಗ್ಗಜ ಬ್ಯಾಟ್ಸ್‌ಮನ್‌ಗಳನ್ನು (ಹೆಂಡ್ರಿಕ್ಸ್, ಯಾನ್ಸನ್) ಅವರು ಬೌಲ್ಡ್ ಮಾಡಿದರು. ಕ್ಲಾಸೆನ್, ಡೇವಿಡ್ ಮಿಲ್ಲರ್ ವಿಕೆಟ್‌ಗಳನ್ನು ಹಾರ್ದಿಕ್ ಪಾಂಡ್ಯ ಜಾಣತನದಿಂದ ಕಿತ್ತರು. ಅರ್ಷದೀಪ್ ನಾಲ್ಕು ಓವರ್‌ಗಳಲ್ಲಿ ಕೇವಲ 20 ರನ್ ಕೊಟ್ಟು ಡಿ ಕಾಕ್ ಹಾಗೂ ಮರ್ಕರಂ ಇಬ್ಬರನ್ನೂ ಪೆವಿಲಿಯನ್‌ಗೆ ಕಳುಹಿಸಿದರು. ಕೊನೆಯಲ್ಲಿ ಬೌಂಡರಿ ಗೆರೆಯಲ್ಲಿ ಅದ್ಭುತ ಕ್ಯಾಚ್ ಹಿಡಿದ ಸೂರ್ಯ, ವಿಜಯದ ಮೆಟ್ಟಿಲಿನ ಮೇಲೆ ಎಲ್ಲರನ್ನೂ ನಿಲ್ಲಿಸಿದರು.


ಗೆಲುವಿನ ನಂತರ ಮಗಳನ್ನು ಹೆಗಲ ಮೇಲೆ ಕೂರಿಸಿಕೊಂಡು ಕ್ರೀಡಾಂಗಣವನ್ನು ಸುತ್ತುತ್ತಿರುವ ರೋಹಿತ್ ಶರ್ಮ

ಈ ಸಲದ ಟ್ವೆಂಟಿ20 ವಿಶ್ವಕಪ್‌ನ ಭಾರತದ ಇನಿಂಗ್ಸ್‌ಗಳ ಮೇಲಿನ ಟಿಪ್ಪಣಿಗಳನ್ನು ನೋಡಿದರೆ, ಇದೊಂದು ಸಾಂಘಿಕ ಹೋರಾಟದ ಫಲವೆನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆಟ ಇರಬೇಕಾದುದೇ ಹಾಗೆ ಅಲ್ಲವೆ?

ಟೂರ್ನಿಯಲ್ಲಿ ರೋಹಿತ್ ಶರ್ಮ ಭಾರತದ ಪರವಾಗಿ ಅತಿ ಹೆಚ್ಚು, ಅಂದರೆ 257 ರನ್ ಗಳಿಸಿದರು. ಮಿಕ್ಕಿದ್ದೆಲ್ಲ ಸಾಂಘಿಕ ಕಾಣಿಕೆ. ಬೌಲರ್‌ಗಳಲ್ಲಿ ಅರ್ಷದೀಪ್ ಒಟ್ಟು 17 ವಿಕೆಟ್ ಪಡೆದರೆ, ಬೂಮ್ರಾ 15 ವಿಕೆಟ್ ಗಿಟ್ಟಿಸಿಕೊಂಡರು. ಬೂಮ್ರಾ ಎಕಾನಮಿಯಂತೂ (4.17) ಚುಟುಕು ಕ್ರಿಕೆಟ್‌ನಲ್ಲಿ ಮರೆಯಲಾಗದಂಥದ್ದು. ಸರಣಿ ಶ್ರೇಷ್ಠ ಎಂಬ ಗೌರವ ಅವರಿಗೆ ಸಂದದ್ದೂ ಅದರಿಂದಲೇ.

'ಈ ವಿಜಯ ಇವತ್ತಿನ ಶ್ರಮವಲ್ಲ; ನಾಲ್ಕು ವರ್ಷಗಳದ್ದು' ಎನ್ನುವ ರೋಹಿತ್ ಶರ್ಮರ ಭಾವುಕ ನುಡಿಯು ಭಾರತ ಕ್ರಿಕೆಟ್ ತಂಡದ 'ಬಹುತ್ವ'ಕ್ಕೆ ಮುನ್ನುಡಿಯಾಗಲಿ.

ಪ್ರತಿಕ್ರಿಯಿಸಿ: feedback@sudha.co.in